ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-04-1971.

*<u>ಮನಸ್ಸಿನ ಭಾವಗಳನ್ನು ತಿಳಿಯುವ ವಿಧಿ ಮತ್ತು ಲಾಭಗಳು</u>* (मन के भावों को जानने की विधि तथा फायदे)

ಇಲ್ಲಿ ಕುಳಿತಿರುವ ಸರ್ವರೂ ಮನ್ಮನಾಭವದ ಸ್ಥಿತಿಯಲ್ಲಿ ಇರುವಿರಾ? ಯಾರು ಸ್ವಯಂ ಮನ್ಮನಾಭವದ ಸ್ಥಿತಿಯಲ್ಲಿ ಇರುತ್ತಾರೆಯೋ ಅವರು ಅನ್ಯರ ಮನಸ್ಸಿನ ಭಾವನೆಗಳನ್ನು ತಿಳಿದುಕೊಳ್ಳುತ್ತಾರೆ. ಯಾವುದೇ ವ್ಯಕ್ತಿ ನಿಮ್ಮ ಮುಂದೆ ಬಂದಾಗ ಮನ್ಮನಾಭವದ ಸ್ಥಿತಿಯಲ್ಲಿ ಸ್ಥಿತರಾಗಿ, ಆಗ ಅವರ ಮನಸ್ಸಿನ ಭಾವನೆಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವಿರಿ. ಏಕೆಂದರೆ ಯಾವಾಗ ನಿಮ್ಮ ಸ್ಥಿತಿ ಸೂಕ್ಷ್ಮವಾಗಿ, ಮನ್ಮನಾಭವವಾಗಿ ಇರುತ್ತದೆಯೋ ಆ ಸೂಕ್ಷ್ಮ ಸ್ಥಿತಿ ಸೂಕ್ಷ್ಮ ಭಾವನೆಯನ್ನು ಗ್ರಹಿಸಬಲ್ಲದು. ಹಾಗಾದರೆ ಈ ಅಭ್ಯಾಸ ಅನುಭವದಲ್ಲಿ ಬರುತ್ತಿದೆಯೇ? ಮಾತು ಭಲೇ ಯವುದೇ ಆಗಿರಬಹುದು ಆದರೆ, ಭಾವ ಯಾರದು ಹೇಗೆ ಇದೆ ಅದನ್ನು ತಿಳಿದುಕೊಳ್ಳುವ ಅಭ್ಯಾಸ ಮಾಡುತ್ತಾ ಹೋಗಿರಿ. ಯಾವಾಗ ಯಾರದಾದರೂ ಮನಸ್ಸಿನ ಭಾವವನ್ನು ತಿಳಿಯಬಲ್ಲಿರೋ ಆಗ ಪರಿಣಾಮ ಏನಾಗುತ್ತದೆ? ಪ್ರತಿಯೊಬ್ಬರ ಮನಸ್ಸಿನ ಭಾವವನ್ನು ತಿಳಿದುಕೊಳ್ಳುವುದರಿಂದ ಅವರ ಇಚ್ಛೆ ಏನಿದೆ, ಅಥವಾ ಯಾವ ಪ್ರಾಪ್ತಿಯ ಇಚ್ಛೆ ಅವರಿಗೆ ಇದೆಯೋ ಅದೇ ಸಿಕ್ಕರೆ ಏನಾಗುತ್ತದೆ? ನೀವು ಅವರನ್ನು ಏನು ಮಾಡಬೇಕೆಂದಿರುವಿರಿ ಅದರಂತೆ ಅವರಾಗುತ್ತಾರೆ ಅರ್ಥಾತ್ ಸೇವೆಯ ಸಫಲತೆ ಬಹಳ ಬೇಗ ಸಿಗುತ್ತದೆ. ಏಕೆಂದರೆ ಅವರ ಇಚ್ಛೆಯನುಸಾರ ಅವರಿಗೆ ಪ್ರಾಪ್ತಿ ಆಗುತ್ತದೆ. ಯಾರಾದರೂ ಶಾಂತಿಗಾಗಿ ನೀರಡಿಕೆಯಾದವರಿಗೆ ಶಾಂತಿ ಸಿಕ್ಕುಬಿಟ್ಟರೆ ಏನಾಗುವುದು? ಪ್ರಾಪ್ತಿ ಆಗುವುದರಿಂದ ಅವಿನಾಶಿ ಪುರುಷಾರ್ಥಿ ಆಗುತ್ತಾರೆ. ಆದ್ದರಿಂದ ಮನಸ್ಸಿನ ಭಾವವನ್ನು ಗುರುತಿಸುವುದರಿಂದ ಅರಿತುಕೊಳ್ಳುವುದರಿಂದ ಪರಿಣಾಮ ಏನಾಗುವುದು? ಸೇವೆಯ ಸಫಲತೆ ಸ್ವಲ್ಪ ಸಮಯದಲ್ಲಿ ಹೆಚ್ಚು ಕಂಡುಬರುವುದು, ಏಕೆಂದರೆ ಸಫಲತಾ ಸ್ವರೂಪ ಆಗುವಿರಿ. ಈಗ ಪುರುಷಾರ್ಥ ಸ್ವರೂಪ ಆಗಿರುವಿರಿ. ಈ ಲಕ್ಷಣ ಬರುವುದರಿಂದ ಸಫಲತೆಯ ಸ್ವರೂಪ ಆಗುವಿರಿ, ತಿಳಿಯಿತೆ?

ಈಗ ಸಫಲತೆಯನ್ನು ಪಡೆಯಲು ನೀವು ಸಮಯ ಮತ್ತು ಸಂಕಲ್ಪ, ಸಂಪತ್ತು, ಶಕ್ತಿ ಬಹಳ ತೊಡಗಿಸಬೇಕಾಗುತ್ತದೆ. ನಂತರ ಏನಾಗುವುದು? ಸಫಲತೆ ಸ್ವಯಂ ನಿಮ್ಮ ಸಮ್ಮುಖದಲ್ಲಿ ಬರುವುದು, ಸಂಪತ್ತು ತೊಡಗಿಸಬೇಕಾಗಿಲ್ಲ. ಸಂಪತ್ತು ಸ್ವಯಂ ನಿಮ್ಮ ಮುಂದೆ ಸ್ವಾಹಾ ಆಗಲು ಬರುವುದು. ತಿಳಿಯಿತೆ? ಕೇವಲ ಒಂದು ಮಾತಿನ ಧಾರಣೆಯಿಂದ ಇಷ್ಟು ಅಂತರ ಆಗುತ್ತದೆ. ಅದು ಯಾವ ಮಾತು? ಮನ್ಮನಾಭವವಾಗಿ ಪ್ರತಿಯೊಬ್ಬರ ಮನಸ್ಸಿನ ಭಾವವನ್ನು ತಿಳಿಯುವುದು. ಪ್ರಕೃತಿ ದಾಸಿ ಎನ್ನುವ ಗಾಯನ ಇದೆ, ಅದು ಸತ್ಯಯುಗದಲ್ಲಿ ಆಗುವುದೇನು? ಸತ್ಯಯುಗದಲ್ಲಿ ಪ್ರಕೃತಿಯ ಮೇಲೆ ವಿಜಯ ಪಡೆದಿರುವುದರಿಂದ ಪ್ರಾಪ್ತಿ ಆಗಿದೆ ಎನ್ನುವುದೇ ಗೊತ್ತಿರುವುದಿಲ್ಲ. ಆದರೆ ಈಗ ಪ್ರಕೃತಿಯ ಮೇಲೆ ವಿಜಯ ಪಡೆಯಲು ಇಷ್ಟು ಪುರುಷಾರ್ಥ ಮಾಡುತ್ತೀರಿ, ಅದರ ಮೇಲೆ ವಿಜಯದ ಫಲ ಅಥವಾ ಪ್ರಾಪ್ತಿ ಈ ಶ್ರೇಷ್ಠ ಜನ್ಮದಲ್ಲಿಯೇ ನೋಡುತ್ತೀರಿ. ಪ್ರಕೃತಿ ನಿಮ್ಮ ಮುಂದೆ ನಿಮ್ಮನ್ನು ಅಧೀನ ಮಾಡುವುದಿಲ್ಲ. ಆದರೆ ಅಧಿಕಾರಿ ಆಗಿ ಪ್ರಕೃತಿಯ ಕರ್ತವ್ಯವನ್ನು ನೋಡುವಿರಿ. ತಿಳಿಯಿತೆ? ಯಾವುದೇ ಪ್ರಕಾರದ ಅಧೀನತೆ ಇಲ್ಲದ ಸಂಪೂರ್ಣ ಸ್ಥಿತಿ, ಸರ್ವರ ಮೇಲೆ ಅಧಿಕಾರ ಅನುಭವ ಮಾಡುವಿರಿ. ಈ ರೀತಿ ಆಗಲು ಏನು ಮಾಡಬೇಕಾಗುವುದು? ಒಂದು ಆತ್ಮೀಯತೆ, ಇನ್ನೊಂದು ಸದಾ ಚಹರೆಯಲ್ಲಿ ಈಶ್ವರೀಯ ನಶೆ ಕಂಡುಬರಬೇಕು ಮತ್ತು ಮೂರನೇಯದು ಸೇವೆಯಲ್ಲಿ ಸದಾ ದಯಾಹೃದಯಿಯ ಸಂಸ್ಕಾರ ಅಥವಾ ಗುಣ ಪ್ರತ್ಯಕ್ಷವಾಗಿ ಪ್ರತಿ ಆತ್ಮನಿಗೆ ಅನುಭವವಾಗಬೇಕು. ಮೂರೂ ಮಾತುಗಳು ಆತ್ಮಿಯತೆ, ನಶೆ ಮತ್ತು ದಯಾಹೃದಯದ ಗುಣ ಕರ್ಮದಲ್ಲಿ ಕಂಡುಬರಬೇಕು. ಆಗ ಸಫಲತೆ ನಮ್ಮ ಸಮೀಪ ಇದೆ ಎಂದು ತಿಳಿದುಕೊಳ್ಳಿ. ಮೂರೂ ಜೊತೆಯಲ್ಲಿರಬೇಕು. ಆಗ ಏನಾಗುತ್ತದೆ? ದಯಾ ಹೃದಯಿ ಆದಾಗ ಅದರ ಜೊತೆ ನಶೆಯೂ ಸಹ ಇರಬೇಕು ಆದರೆ ಇವೆರಡೂ ಇರುವುದಿಲ್ಲ. ದಯಾ ಹೃದಯ ಇಲ್ಲವೆ ನಶೆ ಕಂಡು ಬರುತ್ತದೆ. ನಶೆಯ ಜೊತೆ ಆತ್ಮಿಯತೆಯೂ ಇರಬೇಕು. ಮೂರೂ ಪ್ರತ್ಯಕ್ಷ ರೂಪದಲ್ಲಿ ಜೊತೆಯಲ್ಲಿರಬೇಕು. ಅದು ಇನ್ನೂ ಕಡಿಮೆ ಇದೆ. ಅಭ್ಯಾಸಿಯಾಗಿದ್ದೀರಿ, ಈಗ ನಿಮ್ಮನ್ನು ನೀವು ಕೇವಲ ಸರ್ವ ಆತ್ಮರಲ್ಲಿ ಮಹಾನ್ ಆತ್ಮ ಎಂದು

ತಿಳಿದುಕೊಳ್ಳುತ್ತೀರಿ. ಮಹಾನ್ ಆತ್ಮ ಆಗಿ ಸಂಕಲ್ಪ ಮತ್ತು ಕರ್ಮ ಮಾಡುತ್ತಿರಾ? ತಿಳಿದುಕೊಳ್ಳುವುದು ಲಕ್ಷ್ಯವಾಗಿದೆ ಮತ್ತು ಮಾಡುವುದು ಪ್ರ್ಯಾಕ್ಟಿಕಲ್ ಆಗಿದೆ. ಸರ್ವಾತ್ಮರಲ್ಲಿ ಶ್ರೇಷ್ಠಕ್ಕಿಂತ ಶ್ರೇಷ್ಠ ಮಹಾನ್ ಆತ್ಮರಾಗಿದ್ದೇವೆ ಈ ಸ್ಮೃತಿಯಿಂದ ಯಾರ ಮುಂದೆ ಹೋದರೂ ಏನು ಅನುಭವ ಮಾಡುತ್ತಾರೆ? ನಿಮ್ಮ ಮಹಾನತೆಯ ಮುಂದೆ ಎಲ್ಲರ ತಲೆಯೂ ಬಾಗುತ್ತದೆ. ಯಾವ ರೀತಿ ನಿಮ್ಮ ಜಡ ಚಿತ್ರದ ಮುಂದೆ ಕಲಿಯುಗದಲ್ಲಿನ ಎಷ್ಟೇ ದೊಡ್ಡ ಪದವಿ ಇರುವವರು ಹೋದರೆ ಏನು ಮಾಡುತ್ತಾರೆ? ತಲೆ ಬಾಗಿಸುತ್ತಾರೆ. ಯಾವಾಗ ಚಿತ್ರದ ಮುಂದೆ ತಲೆ ಬಾಗಿಸುತ್ತಾರೆ ಎಂದ ಮೇಲೆ ಚೈತನ್ಯ ಚಾರಿತ್ರ್ಯವಂತರು, ಸರ್ವ ಗುಣಗಳಲ್ಲಿ ತಂದೆಯ ಸಮಾನ ಚೈತನ್ಯ ಮೂರ್ತಿಯ ಮುಂದೆ ತಲೆ ಬಾಗಿಸುವುದಿಲ್ಲವೇ? ಅಥವಾ ಇದು ಭವಿಷ್ಯದಲ್ಲಿ ಆಗುವ ಪರಿಣಾಮ ಎಂದು ತಿಳಿಯುತ್ತೀರೊ? ಈಗ ಆಗುವುದೇ? ಯಾವಾಗ? ಅಂತ್ಯ ಆಗುವುದಕ್ಕೂ ಎಷ್ಟು ಸಮಯ ಇದೆ?

ನೀವು ಬಾಗಿ ಅವರನ್ನು ಬಾಗಿಸಿದರೆ ಇದು ಯಾವ ದೊಡ್ಡ ಮಾತು? ಸೇವೆಯ ಸಲುವಾಗಿ ಬಾಗಬೇಕಾಗುತ್ತದೆ ಎನ್ನುವ ಲಕ್ಷ್ಯವನ್ನು ಇಟ್ಟುಕೊಳ್ಳುತ್ತೀರಿ. ಈ ಲಕ್ಷ್ಯ ತಪ್ಪಾಗಿದೆ. ಈ ಲಕ್ಷ್ಯದಲ್ಲಿಯೇ ದುರ್ಬಲತೆ ಇದೆ. ಬೀಜವೇ ದುರ್ಬಲ ಇರುವಾಗ ಫಲ ಏನು ಬರುತ್ತದೆ? ಏನಾದರೂ ಹೊಸದನ್ನು ಸ್ಥಾಪನೆ ಮಾಡುವವರು ಸ್ವಲ್ಪ ಬಾಗಬೇಕಾಗುತ್ತದೆ ಎಂದು ವಿಚಾರ ಮಾಡುವುದಿಲ್ಲ. ಯಾವಾಗ ಆತ್ಮರೂ ಸಹ ಬಾಗಿಸುವ ಲಕ್ಷ್ಯ, ಇಟ್ಟುಕೊಂಡು ಅನೇಕರನ್ನು ತಮ್ಮ ಮುಂದೆ ಬಾಗಿಸಿ ತೋರಿಸುತ್ತಾರೆ, ಅದಕ್ಕೆ ಹೋಲಿಸಿ ನೋಡಿರಿ – ಈ ಸ್ಥಾಪನೆ ಎಷ್ಟು ಶ್ರೇಷ್ಠವಾಗಿದೆ ಮತ್ತು ಯಾರ ಮತದನುಸಾರ ಇದೆ! ಇದರ ಮುಂದೆ ಸರ್ವಾತ್ಮರು ಬಾಗಬೇಕು ಈ ಲಕ್ಷ್ಯವನ್ನಿಟ್ಟುಕೊಂಡು, ಈ ಈಶ್ವರೀಯ ನಶೆ ಯನ್ನು ಧಾರಣೆ ಮಾಡಿಕೊಂಡು ಯಾರ ಮುಂದಾದರೂ ಹೋಗಿ ಆಗ ನೋಡಿ ಪರಿಣಾಮ ಏನಾಗಿರುತ್ತದೆ.

ಮಹಾನತೆ ತಂದುಕೊಳ್ಳಲು ಜ್ಞಾನದ ಸೂಕ್ಷ್ಮತೆಯಲ್ಲಿ ಹೋಗಬೇಕು. ಎಷ್ಟು ಜ್ಞಾನದ ಸೂಕ್ಷ್ಮತೆಯಲ್ಲಿ ಹೋಗುತ್ತೀರೋ ಅಷ್ಟು ನಿಮ್ಮನ್ನು ನೀವು ಮಹಾನ್ ಮಾಡಿಕೊಳ್ಳಲು ಸಾಧ್ಯ. ಮಹಾನತೆ ಕಡಿಮೆ ಇದೆ ಎಂದರೆ ಜ್ಞಾನದ ಸೂಕ್ಷ್ಮತೆಯ ಅನುಭವದಲ್ಲಿಯೂ ಕಡಿಮೆಇರುವಿರಿ ಎಂದರ್ಥ. ಆದ್ದರಿಂದ ನಿಮ್ಮನ್ನು ನೀವು ಪರಿಶೀಲನೆ ಮಾಡಿಕೊಳ್ಳಿ, ಮಹಾನ್ ಆತ್ಮರ ಕರ್ತವ್ಯ ಏನಾಗಿರುತ್ತದೆ ಅದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ. ಮಹಾನ್ ಆತ್ಮ ಎಂದು ಹೇಳುವುದು ಮಹಾನ್ ಕಾರ್ಯ ಮಾಡಿ ತೋರಿಸಿದವರಿಗೆ ಸಾಧಾರಣ ಕರ್ತವ್ಯ ಮಾಡಿದವರಿಗೆ ಮಹಾನಾತ್ಮ ಎಂದು ಹೇಳುವುದಿಲ್ಲ. ಮಹಾನಾತ್ಮರ ಕರ್ತವ್ಯವೂ ಮಹಾನ್ ಆಗಿರಬೇಕು. ಇಡೀ ದಿನದ ದಿನಚರಿಯಲ್ಲಿ ನೋಡಿಕೊಳ್ಳಿ ಮಹಾನ್ ಆತ್ಮ ಆಗಿರುವ ನಾನು ಯಾವ ಮಹಾನ್ ಕರ್ತವ್ಯವನ್ನು ಇಂದು ಮಾಡಿದೆ? ಮಹಾದಾನಿ ಆಗಿದ್ದೆನೆಯೇ? ಮಹಾನ್ ಆತ್ಮರ ಕರ್ತವ್ಯ ದಾನ, ಪುಣ್ಯ ಮಾಡುವುದೇ ಆಗಿರುತ್ತದೆ. ಹಾಗೆ ಇವರೆಲ್ಲರೂ ಮಹಾನ್ ಆತ್ಮ ಎಂದು ಹೇಳಿಸಿಕೊಳ್ಳುವವರಾಗಿದ್ದಾರೆ. ಹಾಗಾದರೆ ಇಂದು ಇಡೀ ದಿನದಲ್ಲಿ ಎಷ್ಟು ಜನರಿಗೆ ದಾನ ಮಾಡಿದೆ ಮತ್ತು ಯಾವ ದಾನ ಮಾಡಿದೆ? ಯಾವ ರೀತಿ ಮಹಾನ್ ಆತ್ಮರ ಭೋಜನ, ಊಟ- ಪಾನೀಯ ಮಹಾನ್ ಆಗಿರುತ್ತದೆಯೋ, ಅದೇ ರೀತಿ ನೋಡಿಕೊಳ್ಳಬೇಕು ನಮ್ಮ ಬುದ್ಧಿಯ ಭೋಜನ ಮಹಾನ್ ಆಗಿತ್ತೇ? ಶುದ್ಧ ಭೋಜನ ಸ್ವೀಕಾರ ಮಾಡಿದೆನೆ? ನೋಡಿ, ಮಹಾನ್ ಆತ್ಮ ಎಂದು ಹೇಳಿಸಿಕೊಳ್ಳುವವರು ಅಶುದ್ಧ ಭೋಜನ ಮಾಡಿದರೆ, ನೋಡಿದವರು ಏನನ್ನುತ್ತಾರೆ? ಇವರು ಮಹಾನ್ ಆತ್ಮರೇ? ಆದ್ದರಿಂದ ನಿಮ್ಮನ್ನು ನೀವೇ ಪರಿಶೀಲನೆ ಮಾಡಿಕೊಳ್ಳಿ ಇಂದು ನಾನು ಬುದ್ಧಿಯ ಮೂಲಕ ಯಾವುದೇ ಅಶುದ್ಧ ಸಂಕಲ್ಪದ ಬೋಜನ ಸ್ವೀಕಾರ ಮಾಡಲಿಲ್ಲ ತಾನೇ? ಮಹಾನ್ ಆತ್ಮರ ಆಹಾರ ವಿಹಾರವನ್ನೇ ನೋಡಲಾಗುತ್ತದೆ. ಹಾಗಾದರೆ ಇಂದು ಇಡೀ ದಿನ ಬುದ್ಧಿಯ ಆಹಾರ ಎಂತಹದಾಗಿತ್ತು? ಯಾವುದಾದರೂ ಅಶುದ್ಧ ಸಂಕಲ್ಪ ಅಥವಾ ವಿಕಲ್ಪ ಅಥವಾ ವ್ಯರ್ಥ ಸಂಕಲ್ಪವನ್ನು ಬುದ್ಧಿ ಗ್ರಹಣ ಮಾಡಿದ್ದರೆ ಇಂದು ನನ್ನ ಆಹಾರದಲ್ಲಿ ಅಶುದ್ಧಿ ಇತ್ತು ಎಂದು ತಿಳಿದುಕೊಳ್ಳಿ, ಯಾರು ಮಹಾನ್ ಆತ್ಮ ಆಗಿರುತ್ತಾರೆಯೋ ಅವರ ಪ್ರತಿ ವ್ಯವಹಾರದಲ್ಲಿ ಅರ್ಥಾತ್ ಚಲನೆಯಲ್ಲಿ ಸರ್ವಾತ್ಮರಿಗೆ ಸುಖದ ದಾನ ಕೊಡುವ ಲಕ್ಷ್ಯ ಇರುತ್ತದೆ. ಅವರು ಸುಖ ಕೊಡುತ್ತಾರೆ ಮತ್ತು ಸುಖ ತೆಗೆದುಕೊಳ್ಳುತ್ತಾರೆ. ಅದೇ ರೀತಿ ನಿಮ್ಮನ್ನು ನೀವು ಪರಿಶೀಲನೆ ಮಾಡಿಕೊಳ್ಳಿ ನಾನು ಇಂದು ಯಾರಿಗೂ ಯಾವ ದುಃಖವನ್ನೂ ಕೊಡಲಿಲ್ಲ ಮತ್ತು ತೆಗೆದುಕೊಳ್ಳಲಿಲ್ಲ ತಾನೇ? ಪುಣ್ಯದ ಕಾರ್ಯ ಯಾವುದು? **ಪುಣ್ಯ ಅರ್ಥಾತ್ ಯಾರಿಗಾದರೂ ಏನಾದರೂ ಕೊಟ್ಟಾಗ**

**ಆ ಆತ್ಮನಿಂದ ಆಶೀರ್ವಾದ ಬರಬೇಕು. ಇದಕ್ಕೆ ಪುಣ್ಯದ ಕರ್ತವ್ಯ ಎಂದು ಹೇಳುತ್ತಾರೆ. ಯಾರಿಗೆ ಸುಖ ಕೊಡುತ್ತೀರಿ ಅವರ ಅಂತರ್ಯದಿಂದ ನಿಮಗೆ ಆಶೀರ್ವಾದ ಸಿಗುತ್ತದೆ. ಹೀಗೆ ಇದು ಪುಣ್ಯದ ಕಾರ್ಯವಾಗಿದೆ.** ಮತ್ತು ಮುಖ್ಯ ಲಕ್ಷಣವಾಗಿದೆ ಅಹಿಂಸೆ. ನೀವೂ ಇಡೀ ದಿನದಲ್ಲಿ ಯಾವ ಹಿಂಸೆ ಮಾಡಲಿಲ್ಲ ತಾನೇ ಎಂದು ಪರಿಶೀಲನೆ ಮಾಡಿಕೊಳ್ಳಿ, ಪರಿಶೀಲನೆ ಮಾಡಿಕೊಳ್ಳಬೇಕಾದಂತಹ ಯಾವ ಹಿಂಸೆ ನಡೆಯುತ್ತದೆ? ನಿಮ್ಮನ್ನು ನೀವು ಡಬಲ್ ಅಹಿಂಸಕರು ಎಂದು ಹೇಳಿಸಿಕೊಳ್ಳುತ್ತೀರಿ ಅಲ್ಲವೆ. ಮನ್ಸಾದಲ್ಲಿ ಸಂಕಲ್ಪಗಳ ಯುದ್ಧವೂ ಸಹ ಬಹಳ ನಡೆಯುತ್ತದೆ. ಅಂದಮೇಲೆ ಮಾಯೆಯನ್ನು ಕೊಲ್ಲುವ ಹಿಂಸೆ ಮಾಡುತ್ತೀರಿ ಅಲ್ಲವೆ. ಯುದ್ಧವಾಗಿದ್ದರೂ ಇದಕ್ಕೆ ಅಹಿಂಸೆ ಎಂದು ಏಕೆ ಹೇಳುತ್ತಾರೆ? ಏಕೆಂದರೆ ಈ ಯುದ್ಧದ ಪರಿಣಾಮ ಸುಖ ಮತ್ತು ಶಾಂತಿ ಆಗಿದೆ. **ಹಿಂಸೆ ಅಂದರೆ ಅದರಿಂದ ದುಃಖ ಮತ್ತು ಅಶಾಂತಿಯ ಪ್ರಾಪ್ತಿ ಆಗುತ್ತದೆ. ಆದರೆ ಇದರಿಂದ ಸುಖ, ಶಾಂತಿ ಮತ್ತು ಕಲ್ಯಾಣದ ಪ್ರಾಪ್ತಿ ಆಗುತ್ತದೆ ಆದ್ದರಿಂದ ಇದಕ್ಕೆ ಹಿಂಸೆ ಎಂದು ಹೇಳುವುದಿಲ್ಲ ಅಂದಮೇಲೆ ಡಬಲ್ ಅಹಿಂಸಕರಾದಿರಿ. ಆದ್ದರಿಂದ ಮಹಾನ್ ಆತ್ಮರ ಲಕ್ಷಣದ ಗಾಯನ ಯಾವುದಿದೆ ಅದನ್ನೂ ನೋಡಬೇಕು. ಇಂದಿನ ದಿನ ಯಾವುದೇ ಪ್ರಕಾರದ ಹಿಂಸೆ ಮಾಡಲಿಲ್ಲ. ತಾನೇ? ಯಾವುದಾದರೂ ಶಬ್ದದಿಂದ ಯಾರ ಸ್ಥಿತಿಯನ್ನು ಏರುಪೇರು ಮಾಡಿದರೆ ಅದೂ ಸಹ ಹಿಂಸೆ ಆಯಿತು. ಹೇಗೆ ಬಾಣದಿಂದ ಘಾಸಿಗೊಳಿಸುವುದು ಹಿಂಸೆ ಆಯಿತಲ್ಲವೆ. ಅದೇ ರೀತಿ ಯಾರನ್ನಾದರೂ ಶಬ್ದದಿಂದ ಈಶ್ವರೀಯ ಸ್ಥಿತಿಯಿಂದ ಏರುಪೇರು ಮಾಡಿದರೆ ಅರ್ಥಾತ್ ಘಾಸಿಗೊಳಿಸಿದರೆ ಅದು ಹಿಂಸೆ ಆಯಿತಲ್ಲವೆ**. ನಿಜವಾದ ಸತೋಪ್ರಧಾನ ಸಂಸ್ಕಾರ ಅಥವಾ ಆತ್ಮದ ಯಾವ ಮೂಲ ಈಶ್ವರೀಯ ಸಂಸ್ಕಾರ ಇದೆಯೋ ಅದನ್ನು ಬಿಟ್ಟು ಬೇರೆ ಸಂಸ್ಕಾರವನ್ನು ಪ್ರಾಕ್ಟಿಕಲ್‌ನಲ್ಲಿ ತಂದರೆ, ಯಾರದಾದರೂ ಕತ್ತು ಹಿಸುಕಿ ಹಿಂಸೆ ಮಾಡಿದಂತೆ ಎಂದು ತಿಳಿಯಿರಿ. ಹೀಗೆ ನಿಮ್ಮ ಮೂಲ ಅಥವಾ ಸತೋಪ್ರಧಾನ ಸಂಸ್ಕಾರವನ್ನು ಹಿಸುಕಿದಂತೆ - ಇದೂ ಸಹ ಹಿಂಸೆ ಆಗಿದೆ. ತಿಳಿಯಿತೆ?

ಈ ಲಕ್ಷಣವೂ ಸಹ ಎಲ್ಲಿಯವರೆಗೆ ಪ್ರ್ಯಾಕ್ಟಿಕಲ್‌ನಲ್ಲಿದೆ ಎನ್ನುವುದನ್ನು ಪರಿಶೀಲನೆ ಮಾಡಿಕೊಳ್ಳಿ. ಈಗ ತಿಳಿಯಿತೆ ಮಹಾನ್ ಆತ್ಮರ ಲಕ್ಷಣ ಏನಾಗಿದೆ? ಇಡೀ ದಿನ ದಾನ, ದಾನವನ್ನೂ ಮಾಡಿದಿರಿ ಮತ್ತು ಪುಣ್ಯ ಕರ್ಮವನ್ನೂ ಮಾಡಿದಿರಿ ಮತ್ತು ಅಹಿಂಸಕರು ಆದಿರಿ. ಆಗ ಹೇಳಿ ಸ್ಥಿತಿ ಏನಾಗುವುದು? ಆಗ ಇಂತಹ ಸೂಕ್ಷ್ಮತೆಯಲ್ಲಿ ಹೋಗುವಂತಹ, ಸಂಪೂರ್ಣ ಸ್ಥಿತಿಯಲ್ಲಿ ಸ್ಥಿತ ಆಗುವಂತಹ ಮಹಾನ್ ಆತ್ಮರ ಮುಂದೆ ಎಲ್ಲರೂ ಅವಶ್ಯ ತಲೆಬಾಗುವರು. ಸ್ಥೂಲ ತಲೆಯನ್ನು ಬಾಗಿಸುವರೇನು? ತಲೆ ಎಲ್ಲದಕ್ಕಿಂತ ಎತ್ತರದಲ್ಲಿರುತ್ತದೆ. ತಲೆ ಬಾಗಿಸುವುದು ಅರ್ಥಾತ್ ಎಲ್ಲವನ್ನೂ ಬಾಗಿಸುವುದು. ಈಗಿನ ಕಾಲದಲ್ಲಿ ಯಾರು ತಮ್ಮನ್ನು ಉನ್ನತ (ಮಹಾನ್) ಎಂದು ತಿಳಿದಿರುತ್ತಾರೆ ಮತ್ತು ತಮ್ಮ ಕರ್ತವ್ಯವನ್ನು ಉನ್ನತ (ಮಹಾನ್) ಎಂದು ತಿಳಿಯುತ್ತಾರೆ ಅವರು ತಲೆ ಬಾಗಿಸುತ್ತಾರೆ ಅರ್ಥಾತ್ ಇವರು ಮಾಡುವ ಶ್ರೇಷ್ಠ ಕರ್ತವ್ಯದ ಮುಂದೆ ನಾವು ಮಾಡುತ್ತಿರುವ ಕರ್ತವ್ಯ ಏನೂ ಅಲ್ಲ ಎನಿಸುತ್ತದೆ. ತಮ್ಮ ಶ್ರೇಷ್ಠತೆಯನ್ನು ಶ್ರೇಷ್ಠ ಎಂದು ತಿಳಿಯದೇ ಸಾಧಾರಣ ಎಂದು ತಿಳಿಯುತ್ತಾರೆ, ಸರ್ವ ಆತ್ಮರು ತಲೆ ಬಾಗುವುದು ಎಂದು ಇದಕ್ಕೆ ಹೇಳುತ್ತಾರೆ. ಈಗ ತಿಳಿಯಿತೆ ಏನು ಪರಿಶೀಲನೆ ಮಾಡಬೇಕು ಎನ್ನುವುದು. ಇಡೀ ದಿನದಲ್ಲಿ ಮಹಾನ್ ಆತ್ಮರ ಕರ್ತವ್ಯ ಮತ್ತು ಲಕ್ಷಣವನ್ನು ಎಷ್ಟು ಪ್ರ್ಯಾಕ್ಟಿಕಲ್‌ನಲ್ಲಿ ತಂದೆ? ನಂತರ ಪರಿಣಾಮವನ್ನು ಕೇಳುತ್ತೇವೆ.

ಮೊದಲೂ ಹೇಳಿದ್ದೆವಲ್ಲವೆ ನೀವು ತ್ರಿಮೂರ್ತಿ ತಂದೆಯ ಮಕ್ಕಳು ನಿಮ್ಮಿಂದ ತ್ರಿಮೂರ್ತಿ ಪ್ರಕಾಶ ಕಂಡುಬರಬೇಕು ಅರ್ಥಾತ್ ನೀವು ಒಬ್ಬೊಬ್ಬರಿಂದ ಮೂರು ಪ್ರಕಾಶದ ಸಾಕ್ಷಾತ್ಕಾರ ಆಗಬೇಕು. ಯಾರೇ ನಿಮ್ಮ ಮುಂದೆ ಬಂದರೆ ನಿಮ್ಮ ಮಸ್ತಕದಿಂದ ಮಣಿ ಕಾಣಿಸಬೇಕು, ಎರಡು ಕಣ್ಣುಗಳಿಂದ ಎರಡು ಬಲ್ಬಗಳು ಬೆಳಗುತ್ತಿವೆ ಎನ್ನುವ ಅನುಭವ ಆಗಬೇಕು, ಮತ್ತು ಮೂರನೇಯದು ಮಸ್ತಕದ ಮೇಲೆ ಪ್ರಕಾಶದ ಕಿರೀಟ ಕಾಣಿಸಬೇಕು. ಈ ಮೂರೂ ಪ್ರಕಾಶದ ಸಾಕ್ಷಾತ್ಕಾರ ಆಗಬೇಕು ಅನೇಕರಿಗೆ ಆಗುತ್ತಲೂ ಇದೆ. ಯಾವಾಗ ನೆನಪಿನ ಯಾತ್ರೆಯಲ್ಲಿ ಕೂಡಿಸುತ್ತೀರಿ ಆಗ ನಿಮ್ಮ ಎರಡು ನಯನಗಳು ಪ್ರಕಾಶದ ಗೋಳದಂತೆ ಕಾಣುತ್ತವೆ. ಮತ್ತು ಕೆಲವರ ಮಸ್ತಕದಿಂದ ಪ್ರಕಾಶದ ಕಿರೀಟ ಕಂಡುಬರುತ್ತದೆ. ಹೀಗೆ ನಿಮ್ಮ ಮೂಲಕ ಈ ಮೂರೂ ಪ್ರಕಾಶದ ಸಾಕ್ಷಾತ್ಕಾರ ಆದರೆ ಏನಾಗುವುದು? ಸ್ವಯಂ ಪ್ರಕಾಶ ಆಗಿಬಿಡುವಿರಿ. ಅನುಭವಿ ಅಂತೂ ಆಗಿರುವಿರಿ ಅಲ್ಲವೆ. ಸಾಕಾರದಲ್ಲಿ ನೋಡಿರುವಿರಿ, ಮಸ್ತಕದಿಂದ, ನಯನಗಳಿಂದ ಪವಿತ್ರತೆಯ ಕಿರೀಟದ ಸಾಕ್ಷಾತ್ಕಾರ ಅನೇಕರಿಗೆ ಆಯಿತು. ಹೀಗೆ ತಂದೆಯನ್ನು ಅನುಸರಿಸಿರಿ(ಫಾಲೊ ಫಾದರ್).

ಇಂತಹ ಸ್ವರೂಪದ ಸಾಕ್ಷಾತ್ಕಾರ ಆತ್ಮರಿಗೆ ಮಾಡಿಸಿದಾಗ ಸಫಲತೆ ನಿಮ್ಮ ಚರಣಗಳಿಗೆ ಬಂದು ಬಾಗುತ್ತದೆ. ಯಾರ ಮುಂದೆ ಹೋದರೂ ಅವರಿಗೆ ಸಾಕ್ಷಾತ್ಕಾರ ಆಗಬೇಕು, ಇಂತಹ ಮಹಾನ್ ಆತ್ಮರಾಗಿ. ಆಗ ಹೇಳಿ ಅವರು ತಮ್ಮ ತಲೆಯನ್ನು ಸಾಕ್ಷಾತ್ಕಾರ ಮೂರ್ತಿಗಳಾದ ನಿಮ್ಮ ಮುಂದೆ ತೋರಿಸಲು ಸಾಧ್ಯವೇ? ಬಾಗುವರು. ಈಗ ಈ ತಲೆಯನ್ನು ಬಾಗಿಸಿದಾಗ ನಿಮ್ಮ ಜಡ ಚಿತ್ರದ ಮುಂದೆ ತಮ್ಮ ಸ್ಥೂಲ ತಲೆಯನ್ನು ಬಾಗಿಸುವರು. ಯಾರ ಮುಂದೆ ಎಷ್ಟು ಜನರು ಬಾಗುವರೋ ಅಷ್ಟು ಅವರ ಜಡ ಚಿತ್ರದ ಮುಂದೆ ತಲೆ ಬಾಗಿಸುವರು. ಪ್ರಜೆಗಳ ಜೊತೆಗೆ ಭಕ್ತರನ್ನೂ ತಯಾರು ಮಾಡಬೇಕು. ಇಡೀ ಕಲ್ಪದ ಪ್ರಾಲಬ್ಧದ ನಿಗದಿ ಈಗಲೇ ಆಗಬೇಕಾಗಿದೆ. ವಾರಸುದಾರರನ್ನು ಮತ್ತು ಪ್ರಜೆಗಳನ್ನು ಈಗಲೇ ತಯಾರು ಮಾಡಬೇಕು. ದ್ವಾಪರಯುಗದ ಭಕ್ತರೂ ಈಗಲೇ ಆಗುತ್ತಾರೆ. ತಿಳಿಯಿತೆ? ನಿಮ್ಮ ಭಕ್ತರಿಗೂ ನಿಮ್ಮ ಮೂಲಕ ಭಾವನೆಯ ಸಂಸ್ಕಾರ ಈಗ ತುಂಬಬೇಕು. ಇವರು ಬಹಳ ಶ್ರೇಷ್ಠರು ಕೇವಲ ಈ ಭಾವನೆಯ ಸಂಸ್ಕಾರ ತುಂಬುವುದರಿಂದ ಭಕ್ತರಾಗುತ್ತಾರೆ. ಆದ್ದರಿಂದ ಭಕ್ತರನ್ನೂ ಈಗಲೇ ತಯಾರು ಮಾಡಬೇಕು. ಈಗಿನವರೆಗೆ ಪ್ರಜೆಗಳನ್ನು ಮಾಡುವುದಕ್ಕೆ ಶ್ರಮಪಡುತ್ತಿರುವಿರಿ. ಎಷ್ಟೆಷ್ಟು ನಿಮ್ಮ ಸ್ಥಿತಿ ಪ್ರತ್ಯಕ್ಷ ಆಗುತ್ತದೆ ಅಷ್ಟು ನಿಮ್ಮ ವಾರಸುದಾರರು ಅರ್ಥಾತ್ ರಾಜ್ಯ ಪರಿವಾರದವರು, ಪ್ರಜೆ ಮತ್ತು ಭಕ್ತರು ಮೂವರೂ ಪ್ರತ್ಯಕ್ಷ ಆಗುವರು. ಈಗ ಇನ್ನೂ ಬೆರಕೆಯಾಗಿದ್ದಾರೆ. ಏಕೆಂದರೆ ಈಗ ನಿಮ್ಮ ಸ್ಥಿತಿಯೇ ನಿಗದಿಯಾಗಿಲ್ಲ. ಆದ್ದರಿಂದ ಅವರು ಬೆರಕೆಯಾಗಿದ್ದಾರೆ. ನಂತರ ಪ್ರತ್ಯಕ್ಷ ಕಾಣಿಸುವರು. ಇವರು ಭಕ್ತರು ಎಂದು ನೀವು ಅನುಭವ ಮಾಡುವಿರಿ. ಇದೂ ಸಹ ಅನುಭವ ಮಾಡುವಿರಿ ಏಕೆಂದರೆ ತ್ರಿಕಾಲದರ್ಶಿಯ ಗುಣ ಪ್ರತ್ಯಕ್ಷ ಆಗುವುದು. ನಿಮ್ಮ ಮೂರೂ ಕಾಲದ ಪ್ರಾಲಬ್ಧವನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಾಗುವುದು, ದಿವ್ಯ ದೃಷ್ಟಿಯಿಂದ ಅಲ್ಲ, ಪ್ರತ್ಯಕ್ಷ ಸಾಕ್ಷಾತ್ಕಾರ ಮಾಡುವಿರಿ.

ಅವ್ಯಕ್ತ ಮುರಳಿ 18-04-1971.

***ಮನಸ್ಸಿನ ಭಾವನೆಗಳನ್ನು ತಿಳಿಯುವ ವಿಧಿ ಮತ್ತು ಲಾಭಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವಯಂ ಮನ್ಮನಾಭವದ ಸ್ಥಿತಿಯಲ್ಲಿ ಇರುತ್ತಾ ಇತರರ ಮನೋಭಾವನೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಿದ್ದೇನೆ.

2. ನಾನು ಪ್ರತಿಯೊಬ್ಬರ ಮನಸ್ಸಿನ ಭಾವವನ್ನು ತಿಳಿದುಕೊಂಡು ಅವರ ಇಚ್ಛೆ ಅಥವಾ ಪ್ರಾಪ್ತಿಯನ್ನು ಕೊಡುವ ಸಫಲತಾ ಸ್ವರೂಪ.

3. ನಾನು ಪ್ರಕೃತಿಜೀತ್ ಆತ್ಮ.

4. ನಾನು ಆತ್ಮೀಯತೆ, ಈಶ್ವರೀಯ ನಶೆ, ದಯಾಹೃದಯ ಈ ಮೂರು ಗುಣಗಳನ್ನು ಪ್ರತಿ ಆತ್ಮನಿಗೆ ಅನುಭವ ಮಾಡಿಸುತ್ತಾ ಕರ್ಮದಲ್ಲಿ ತಂದಿದ್ದೇನೆ.

5. ನನ್ನ ಮುಂದೆ ಎಲ್ಲರೂ ಶಿರವನ್ನು ಬಾಗಿಸುವಷ್ಟು ನಾನು ಸರ್ವಾತ್ಮರಿಗಿಂತ ಶ್ರೇಷ್ಠವಾದ, ಮಹಾನ್ ಆತ್ಮ.

6. ಮಹಾನ್ ಆತ್ಮನಾದ ನಾನು ಬುದ್ಧಿಯಿಂದ ಸದಾ ಶುದ್ಧ ಸಂಕಲ್ಪ ಮತ್ತು ಸಮರ್ಥ ಸಂಕಲ್ಪಗಳನ್ನು ಭೋಜನದಂತೆ ಸ್ವೀಕರಿಸುತ್ತಿದ್ದೇನೆ.

7. ನಾನು ನನ್ನ ಲಕ್ಷ್ಯ, ನನ್ನ ಪ್ರತಿ ವ್ಯವಹಾರ ಮತ್ತು ನಡವಳಿಕೆಯಿಂದ ಸರ್ವಾತ್ಮರಿಗೆ ಸುಖವನ್ನು ಕೊಡುವ ಮಹಾನ್ ಆತ್ಮನಾಗಿದ್ದೇನೆ.

8. ನಾನು ಇತರ ಆತ್ಮರಿಗೆ ಸುಖವನ್ನು ಕೊಡುತ್ತಾ ಅವರಿಂದ ಆಶೀರ್ವಾದಗಳನ್ನು ಹೊಂದುವ ಪುಣ್ಯಕರ್ಮವನ್ನೇ ಮಾಡುತ್ತಿದ್ದೇನೆ.

9. ನಾನು ಅಹಿಂಸೆಯೇ ನನ್ನ ಮುಖ್ಯ ಲಕ್ಷಣವಾದ ಮಹಾನ್ ಆತ್ಮನಾಗಿದ್ದೇನೆ.

10. ನನ್ನಿಂದ ಪ್ರತಿಯೊಬ್ಬರಿಗೂ ಮೂರು ವಿಧವಾದ ಲೈಟ್ಸ್ ಅರ್ಥಾತ್ ನನ್ನ ಮಸ್ತಕದ ಮಣಿ, ನನ್ನ ಎರಡು ನಯನಗಳಲ್ಲಿ ಕಾಂತಿಯುತವಾದ ಗೋಳ ಹೊಳೆಯುತ್ತಿರುವಂತೆ ಮತ್ತು ಶಿರಸ್ಸಿನ ಮೇಲೆ ಪ್ರಕಾಶದ ಕಿರೀಟ ಕಾಣಿಸುತ್ತಿದೆ.

11. ನಾನು ತಂದೆಯನ್ನು ಅನುಸರಿಸುತ್ತಾ.. ಅಂತಹ ಸ್ವರೂಪವನ್ನು ಎಲ್ಲರಿಗೂ ಸಾಕ್ಷಾತ್ಕಾರ ಮಾಡಿಸುತ್ತಿದ್ದೇನೆ.

12. ನಾನು ನನ್ನ ಪ್ರಜೆಗಳೊಂದಿಗೆ ಭಕ್ತರನ್ನು ಕೂಡ ತಯಾರು ಮಾಡಿಕೊಂಡಿದ್ದೇನೆ.

13. ನನ್ನ ಪ್ರತ್ಯಕ್ಷತೆಯ ಸ್ಥಿತಿಯಿಂದ ನನ್ನ ವಾರಸರು ಅರ್ಥಾತ್ ನನ್ನ ಕುಟುಂಬ, ನನ್ನ ಪ್ರಜೆಗಳು, ನನ್ನ ಭಕ್ತರು ನನಗೆ ಪ್ರತ್ಯಕ್ಷವಾಗುತ್ತಿದ್ದಾರೆ.